ಹುಲಿಯೊಂದನ್ನು ಬಂದೂಕಿನಿಂದ ಶೂಟ್ ಮಾಡುವುದು ಒಳಿತೋ ಅಥವಾ ಕ್ಯಾಮೆರಾದಿಂದ ಶೂಟ್ ಮಾಡುವುದು ಒಳಿತೋ?

# ಪ್ರಾಣಿಗಳ ಕಣ್ಣು ಸುಳ್ಳು ಹೇಳುವುದಿಲ್ಲ



**ಕರ್ಕಿ ಕೃಷ್ಣಮೂರ್ತಿ**
ಕಲೆ: ವಿ.ಎಂ. ಮಂಜುನಾಥ್

'ನಾನೂ ಹುಲಿಯ ಮರಿಗಳಿಗೆ ಹಾಲು ಕುಡಿಸ್ಬೇಕು... ನಾನೂ ಹಾಲು ಕುಡಿಸ್ತೇನೆ ಪ್ಲೀಸ್...' ಎಂದು ದುಂಬಾಲು ಬಿದ್ದ ನನ್ನ ಮಿತ್ರನ ಹತ್ತು ವರ್ಷದ ಮಗ.

ಬ್ಯಾಂಕಾಕಿನ ಹೊರವಲಯದಲ್ಲಿರುವ ಉದ್ಯಾನ ಅದು, ಝೂ ಅನ್ನಲೂಬಹುದು. ಅಲ್ಲಿ ಇಂತಹ ಸಾಕಷ್ಟು ಆಕರ್ಷಣೆಗಳಿವೆ. ಮೊಸಳೆಗಳಿಗೆ ಮಾಂಸ ತಿನ್ನಿಸುವುದು (ಸೇತುವೆಯ ಮೇಲೆ ನಿಂತು ಮಾಂಸದ ಮುದ್ದೆಯನ್ನು ಗಾಳಕ್ಕೆ ಸಿಕ್ಕಿಸಿ ಕೆಳಗಿರುವ ಕೊಳಕ್ಕೆ ಇಳಿಬಿಡುತ್ತಿರುವಂತೆ, ಕೊಳದಲ್ಲಿಯ ಮೊಸಳೆ ಚಂಗನೆ ನೆಗೆದು ಮಾಂಸವನ್ನು ಕಚ್ಚಿ ಎಳೆದುಕೊಳ್ಳುತ್ತದೆ), ಮಕಾವ್ ಹಕ್ಕಿಗಳಿಗೆ ಕಾಳುಣಿಸುವುದು (ಅಲ್ಲೇ ಸಿಗುವ ಪಕ್ಷಿ ಆಹಾರವನ್ನು ಖರೀದಿಸಿ ಬೋಗುಣಿಯಲ್ಲಿ ಹಿಡಿದು ನಿಂತರೆ, ದೊಡ್ಡ ಗಾತ್ರದ ಬಣ್ಣ ಬಣ್ಣದ ಗಿಳಿಗಳು ನಿಮ್ಮ ಹೆಗಲು, ಕೈಗಳ ಮೇಲೆ ಕುಳಿತು ಅದನ್ನು ತಿನ್ನುತ್ತವೆ) – ಹೀಗೆ ಪ್ರವಾಸಿಗರ ರೋಮಾಂಚಕಾರಿ ಫೋಟೊ/ವಿಡಿಯೊಗಳಿಗೆ ಇಂಬುಗೊಡುವ ಸಂಗತಿಗಳೆಲ್ಲ ಅಲ್ಲಿವೆ.

ಅದೇ ರೀತಿ, ಹುಲಿ ಮರಿಗಳಿಗೆ ಹಾಲು ಕುಡಿಸುವುದು ಕೂಡ. ಕೋಣೆಯೊಂದರಲ್ಲಿ ಸಾಲು ಪಂಜರಗಳಿವೆ. ಒಂದೊಂದು ಪಂಜರದಲ್ಲೂ ನಾಲ್ಕರಿಂದ ಆರು ಹುಲಿ ಮರಿಗಳನ್ನು ಕೂಡಿಹಾಕಲಾಗಿದೆ. ಎಲ್ಲವೂ ಹೆಚ್ಚು ಕಮ್ಮಿ ಬೆಕ್ಕಿನ ಗಾತ್ರಕ್ಕಿಂತ ತುಸು ದೊಡ್ಡವು. ಅಲ್ಲೇ ಸಿಗುವ ನಿಪ್ಪಲ್ ಬಾಟಲಿಯಲ್ಲಿನ ಹಾಲು ಖರೀದಿಸಿ ಪ್ರವಾಸಿಗರು ಅವುಗಳಿಗೆ ಹಾಲುಣಿಸಬಹುದು. ನೀವು ಕೈಯಲ್ಲಿ ಬಾಟಲಿ ಹಿಡಿದು ಹತ್ತಿರ ಬರುತ್ತಿರುವಂತೆ, ಆ ಮರಿಗಳು ನಾಮುಂದು ತಾಮುಂದು ಎಂದು ಪೈಪೋಟಿಗೆ ಬಿದ್ದು ಪಂಜರದ ಸರಳುಗಳ ನಡುವೆ ಮೂತಿ ಹೊರಹಾಕಿ ದೈನ್ಯದಿಂದ ನಿಮ್ಮೆಡೆ ನೋಡುವುದನ್ನು ಕಂಡಾಗ, ಇವುಗಳಿಗೆ ಆಹಾರ ನೀಡದೇ ಹಸಿವಿನಿಂದ ಬಳಲುವಂತೆ ಮಾಡಿರಬೇಕು ಎಂದು ಯಾರಿಗಾದರೂ ಅನ್ನಿಸದೇ ಇರಲಾರದು. ನನ್ನ ಗೆಳೆಯನ ಮಗನೂ ಅವುಗಳಿಗೆ ಹಾಲು ಕುಡಿಸಲು ಕಾತರನಾಗಿದ್ದ. ನಮ್ಮಿಂದ ಅದರ ಹಸಿವಾದರೂ ಅಷ್ಟಿಷ್ಟು ಇಂಗಲಿ ಎನ್ನುತ್ತ ನಾವೂ ಅಲ್ಲಿ ಹಾಲಿನ ಬಾಟಲಿಗಳನ್ನು ತುಸು ಧಾರಾಳವಾಗೇ ಖರೀದಿಸಿದೆವು.

ಅಲ್ಲಿಂದ ಹೊರಬಿದ್ದು ಮುಂದೆ ನಡೆದರೆ,